## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 650**

**ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 22-09-2022**

**ಉತ್ತರಿಸುವವರು : ಸನ್ಮಾನ್ಯ ಮುಖ್ಯಮಂತ್ರಿಗಳು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಶಿರಸಿಯ ಕಾಳಿ ಹುಲಿ ಸಂರಕ್ಷಿತಾರಣ್ಯದಲ್ಲಿ ಕೆ.ಟಿ.ಆರ್. ಮತ್ತು ದಾಂಡೇಲಿ ವನ್ಯಜೀವಿ ಅಭಯಾರಣ್ಯದ ಕಳ್ಳಬೇಟೆ ನಿಗ್ರಹಿಸುವ ಶಿಬಿರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಅವಶ್ಯಕತೆ ಇರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ ಎಷ್ಟು; ಈ ಶಿಬಿರಗಳಲ್ಲಿರುವ ಸಿಬ್ಬಂದಿ ಸಂಖ್ಯೆಯು ಅವಶ್ಯಕತೆಗನುಗುಣವಾಗಿ ಇದೆಯೇ; | ರಾಜ್ಯದ ಶಿರಸಿಯ ಕಾಳಿ ಹುಲಿ ಸಂರಕ್ಷಿತಾರಣ್ಯದಲ್ಲಿ ಕೆ.ಟಿ.ಆರ್. ಮತ್ತು ದಾಂಡೇಲಿ ವನ್ಯಜೀವಿ ಅಭಯಾರಣ್ಯದ ಕಳ್ಳಬೇಟೆ ನಿಗ್ರಹಿಸುವ ಶಿಬಿರಗಳಲ್ಲಿ ಒಟ್ಟು 92 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.<br><br>ಅವಶ್ಯಕತೆ ಇರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ:92. ಸದರಿ ಶಿಬಿರಗಳಲ್ಲಿ ಸಿಬ್ಬಂದಿ ಸಂಖ್ಯೆಯು ಅವಶ್ಯಕತೆಗನುಗುಣವಾಗಿ ಇದೆ. |
| ಆ) | ಈ ಶಿಬಿರಕ್ಕೆ ನೀಡಲಾಗುತ್ತಿರುವ ಅನುದಾನ ಎಷ್ಟು; ಅನುದಾನದ ಕೊರತೆಯಿಂದಾಗಿ ಸಿಬ್ಬಂದಿಗಳನ್ನು ಕಡಿತಗೊಳಿಸಿದ್ದು, ಅಗತ್ಯ ಸೌಲಭ್ಯಗಳನ್ನು ನಿಯಮಿತಗೊಳಿಸಿರುವುದರಿಂದ ಕಳ್ಳಬೇಟೆ ನಿಗ್ರಹವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಳ್ಳಬೇಟೆ ನಿಗ್ರಹಿಸುವ ಶಿಬಿರಗಳಲ್ಲಿ ಅವಶ್ಯಕತೆಗನುಗುಣವಾಗಿ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡಿದ್ದು, ಅವರಿಗೆ ಬೇಕಾಗುವ ವೇತನ ಮತ್ತು ಸೌಲಭ್ಯಗಳಿಗೆ ಅವಶ್ಯಕತೆ ಇರುವ ರೂ.226.86 ಲಕ್ಷಗಳನ್ನು ಪ್ರಸ್ತುತ ಸಾಲಿನಲ್ಲಿ ಒದಗಿಸಿಕೊಳ್ಳಲಾಗಿದೆ. |
| ಇ) | ಈ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ರಕ್ಷಣೆಗೆ ಆಯುಧಗಳು ಇಲ್ಲದೇ ಇರುವ ಕಾರಣ ವನ್ಯ ಪ್ರಾಣಿಗಳು ದಾಳಿ ನಡೆಸುವ ಆತಂಕದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಆತಂಕವನ್ನು ನಿವಾರಣೆ ಮಾಡಿ ಅಗತ್ಯ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು? | ಕಾಳಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಕ್ಷಣಾ ಕೆಲಸಗಳಲ್ಲಿ ತೊಡಗಿರುವ ಸಿಬ್ಬಂದಿಗಳಿಗೆ ಅವಶ್ಯಕತೆಗೆ ಅನುಗುಣವಾಗಿ Pump Action Gun-03, DBBL Gun-09, Slide Action Gun-14, Rifle-03 and Pistol-02 ನ್ನು ಒದಗಿಸಲಾಗಿದೆ ಹಾಗೂ ವನ್ಯಪ್ರಾಣಿಗಳಿಂದ ಸಿಬ್ಬಂದಿಗಳಿಗೆ ದಾಳಿಯಾಗುವ ಸಂಭವವಿರುವ ಸೂಕ್ಷ್ಮ ಪ್ರದೇಶದ ಕಳ್ಳಬೇಟೆ ತಡೆ ಶಿಬಿರಗಳಿಗೆ, ಆನೆ ನಿರೋಧಕ ಕಂದಕ ನಿರ್ಮಾಣ ಮಾಡುವ ಮುಖಾಂತರ ಸುರಕ್ಷತೆ ಒದಗಿಸಲಾಗುತ್ತಿದೆ. ಅಲ್ಲದೇ, ಇದುವರೆವಿಗೂ ಸಿಬ್ಬಂದಿಗಳ ಮೇಲೆ ವನ್ಯಪ್ರಾಣಿಯಿಂದ ದಾಳಿಯಾಗಿರುವ ಘಟನೆಗಳು ಸಂಭವಿಸಿರುವುದಿಲ್ಲ. |

**ಸಂಖ್ಯೆ: ಅಪಜೀ 151 ಎಫ್‌ಡಬ್ಲ್ಯೂಎಲ್ 2022**

**(ಬಸವರಾಜ ಬೊಮ್ಮಾಯಿ)**
ಮುಖ್ಯಮಂತ್ರಿ